


# ಸಚಿನ್‌ಗೆ ಇನ್ನೊಂದು ಮನೆ!



**ಕ**ಳೆದ ಒಂದು ತಿಂಗಳಿಂದ ಇಂಟರ್‌ನೆಟ್‌ನಲ್ಲಿ ಹರಿದಾಡಿದ್ದು 'ಸಚಿನ್ ತೆಂಡೂಲ್ಕರ್ ಮುಂಬೈಯಲ್ಲಿ ಶಂಖು ಆಕೃತಿಯ ದುಬಾರಿ ಮನೆಯೊಂದನ್ನು ಕಟ್ಟಿಸಿದ್ದಾರೆ' ಎಂಬ ಬಿಸಿ ಸುದ್ದಿ. ಈ ವಿಚಿತ್ರ ಮನೆಯ ಒಳಾಂಗಣ– ಹೊರಾಂಗಣದ ವರ್ಣರಂಜಿತ ಚಿತ್ರಗಳೂ ನೆಟ್‌ನಲ್ಲಿ ಬಿಸಿ ದೋಸೆಯಂತೆ ಹರಿದಾಡಿವೆ. ಮನೆಯ ಒಳಾಂಗಣ ಅದ್ಭುತವಾಗಿದೆ. ಕಿಚನ್, ಬೆಡ್‌ರೂಂ, ಬಾತ್‌ರೂಂ, ಟಿವಿ ರೂಂ ಎಲ್ಲವೂ ವಿಶಿಷ್ಟ. ಇಡೀ ಮನೆ ಶಂಖುವಿನ ಆಕಾರದಲ್ಲಿದ್ದು, ಬೆಳಕು ಮತ್ತು ವರ್ಣ ವ್ಯವಸ್ಥೆ ಮನ ಸೆಳೆಯುತ್ತದೆ.





ಆದರೆ ನಿಜವಾದ ಸುದ್ದಿ ಏನೆಂದರೆ ಇದು ಸಚಿನ್ ಮನೆಯಲ್ಲ. ನೆಟ್‌ನಲ್ಲಿ ಬಂದ ಸುದ್ದಿಯಲ್ಲಿ ಈ ಮನೆಯ ವಾಸ್ತುಶಿಲ್ಪಿ ವಿಶ್ವಖ್ಯಾತಿಯ ಜೇವಿಯರ್ ಸೆನೊಸಿಯೆನ್ ಎಂದು ನಮೂದಿಸಲಾಗಿದೆ. ಮುಂಬೈಯ ಪತ್ರಕರ್ತ ರೊಬ್ಬರು ಜೇವಿಯರ್‌ನನ್ನು ಸಂಪರ್ಕಿಸಿದಾಗ ಸತ್ಯ ಬಯಲಾಗಿದೆ. 'ಜೇವಿಯರ್‌ಗೆ ಕ್ರಿಕೆಟ್ಟೂ ಗೊತ್ತಿಲ್ಲ; ಸಚಿನ್ ಯಾರೆಂದೂ ಗೊತ್ತಿಲ್ಲ. ಅಸಲಿಗೆ ಜೇವಿಯರ್ ಈವರೆಗೆ ಭಾರತಕ್ಕೆ ಬಂದೂ ಇಲ್ಲ' ಎಂದು ಜೇವಿಯರ್‌ನ ಸಹಾಯಕ ಅಡ್ರಿಯಾನಾ ನವೆರ್ರೊ ಸ್ಪಷ್ಟಪಡಿಸಿದ್ದಾರೆ.

ಆದರೆ ಈ ಮನೆ ಇರುವುದು ಮೆಕ್ಸಿಕೋದಲ್ಲಿ ಎನ್ನುವುದೂ, ಜೇವಿಯರ್ ಅದರ ವಾಸ್ತುಶಿಲ್ಪಿ ಎನ್ನುವುದೂ ನಿಜ. ಮೆಕ್ಸಿಕೋದ ಕಲಾವಿದ, ಉದ್ಯಮಿಯೊಬ್ಬರು ಈ ಮನೆ ಕಟ್ಟಿಸಿದ್ದಾರೆ. ಈ ಮನೆಯ ಹೆಸರು ನಾಟಿಲಸ್ ಹೌಸ್.

ಸಚಿನ್ ಕೆಲವು ತಿಂಗಳ ಹಿಂದೆ ಪಾರ್ಸಿ ಕುಟುಂಬಕ್ಕೆ ಸೇರಿದ ಪುರಾತನ ಮನೆಯೊಂದನ್ನು 35 ಕೋಟಿ ರೂಪಾಯಿಗೆ ಖರೀದಿಸಿದ್ದರು. ಅದು ಬಾಂದ್ರಾ ವೆಸ್ಟ್‌ನ ಕಾರ್ಲೆರ್ ರಸ್ತೆಯಲ್ಲಿರುವ ದೋರಬ್ ವಿಲ್ಲಾ. ಸಚಿನ್ ಇನ್ನೂ ಆ ಮನೆಗೆ ಶಿಫ್ಟ್ ಆಗಿಲ್ಲ. ಸದ್ಯಕ್ಕೆ ಮುಂಬೈಯ ಬಾಂದ್ರಾದಲ್ಲಿರುವ ಲಾ ಮೆರ್ ಕಟ್ಟಡದಲ್ಲಿ ಇದ್ದಾರೆ. ಮದುವೆಯಾಗುವುದಕ್ಕೆ ಮುನ್ನ ಐಶ್ವರ್ಯ ರೈ ಕೂಡಾ ಇದೇ ಕಟ್ಟಡದಲ್ಲಿ ಮನೆ ಹೊಂದಿದ್ದರು. ಶೀಘ್ರವೇ ದೋರಬ್ ವಿಲ್ಲಾಗೆ ಸಚಿನ್ ಹೋಗುತ್ತಾರೆ ಎನ್ನುವುದು ಖರೇ ಸುದ್ದಿ.